ಗೋಹತ್ಯೆ ನಿಷೇಧ ಹಾಗೂ ಪಶುಸಂಗೋಪನಾ ಕಾಯ್ದೆ ಕುರಿತು

71 - ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ (ಚಾಮರಾಜ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ರಾಜ್ಯದಲ್ಲಿ ಗೋಹತ್ಯೆ ಹಾಗೂ ಪಶುಸಂಗೋಪನಾ ಕಾಯ್ದೆ ಇದ್ದರೂ ಕೂಡ, ಅದರ ಉಲ್ಲಂಘನೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಈ ಕಾಯ್ದೆಯನ್ನು ಮತ್ತಷ್ಟು ಬಿಗಿ ಮಾಡುವ ಬಗ್ಗೆ ಸರ್ಕಾರವನ್ನು ಕೈಗೊಳ್ಳಲಿರುವ ಕ್ರಮಗಳೇನು?*

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶಾಂತಿನಗರ ಕ್ಷೇತ್ರದಲ್ಲಿ ವಿದ್ಯುತ್ ಸ್ಥಗಿತ

72 - ಶ್ರೀಮತಿ ಡಿ.ಬಿ. ಹೇಮಾವತಿ (ಶಾಂತಿನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) *ಶಾಂತಿನಗರ ವಿಧಾನ ಸಭಾ ಕ್ಷೇತ್ರದ ನೀಲಸಂದ್ರ, ವಿವೇಕನಗರ, ಅಕ್ಕಿ ತಿಮ್ಮನಹಳ್ಳಿ, ಶಾಂತಿನಗರ, ದೊಮ್ಮಲೂರು ಹಾಗು ಇತರ ಪ್ರದೇಶಗಳಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

2) *ಹಾಗಿದ್ದರೆ, ಅದಕ್ಕೆ ಕಾರಣವೇನು*

3) *ಮೇಲಿನ ಸ್ಥಳಗಳಲ್ಲಿ ಪದೇ ಪದೇ ವಿದ್ಯುತ್ ನಿಲುಗಡೆಯನ್ನು ತಪ್ಪಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

1) ಶಾಂತಿನಗರ ಹಾಗೂ ಅಕ್ಕಿತಿಮ್ಮನಹಳ್ಳಿ ಪ್ರದೇಶಗಳಲ್ಲಿ ಪದೇ ಪದೇ ವಿದ್ಯುತ್ ಅಡಚಣೆಯುಂಟಾಗುತ್ತಿದೆ. ಆದರೆ, ನೀಲಸಂದ್ರ, ವಿವೇಕನಗರ ಹಾಗೂ ದೊಮ್ಮಲೂರು ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಪದೇ ಪದೇ ಅಡಚಣೆ ಉಂಟಾಗುತ್ತಿಲ್ಲ.

2) ಆಸ್ಟಿನ್ ಟೌನ್ ಎಂಯುಎಸ್ಎಸ್‌ನಿಂದ ಸಿದ್ದಯ್ಯ ರೋಡ್‌ವರೆಗೆ ವಿದ್ಯುತ್ ಸರಬರಾಜು ಮಾಡುವ 11 ಕೆ.ವಿ. ಕೇಬಲ್‌ನಲ್ಲಿ ದೋಷವುಂಟಾಗಿರುವುದರಿಂದ ಶಾಂತಿನಗರ, ಅಕ್ಕಿತಿಮ್ಮನ ಹಳ್ಳಿ ಪ್ರದೇಶಗಳ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗಲು ಮುಖ್ಯ ಕಾರಣವಾಗಿದೆ. ಹಾಗೆಯೇ, ವಿದ್ಯುತ್ ಉತ್ಪಾದನೆಯ ಕೊರತೆಯ ಸಂದರ್ಭದಲ್ಲಿ ಲೋ ವೋಲ್ಟೇಜ್ ಇರುವಾಗ, ಮುಖ್ಯ ಪ್ರಸರಣಾ ಮಾರ್ಗಗಳ ಮೇಲ್ವೇಜ್ ಇತ್ಯಾದಿ ಕಾರಣಗಳಿಂದ ಬೆಳಿಗ್ಗೆ ಹಾಗೂ ಸಂಜೆಯ ಪೀಕಲೋಡ್ ಅವಧಿಯಲ್ಲಿ ಮಂಡಳಿಯ ಅನಿರ್ಧಿಷ್ಟಿತ ವಿದ್ಯುತ್ ನಿಲುಗಡೆಯನ್ನು ಬೆಂಗಳೂರು ನಗರದಾದ್ಯಂತ ಕೆಲವೊಮ್ಮೆ ಮಾಡುವುದು.

3) ಶಾಂತಿನಗರ ಹಾಗೂ ಅಕ್ಕಿತಿಮ್ಮನಹಳ್ಳಿ ಪ್ರದೇಶಗಳಲ್ಲಿ ಪದೇ ಪದೇ ಆಗುತ್ತಿರುವ ವಿದ್ಯುತ್ ಅಡಚಣೆಯನ್ನು ತಪ್ಪಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.

ಅ) ಕಂಠೀರವ ಸ್ಟೇಡಿಯಂ ಸ್ವಿಚಿಂಗ್ ಸ್ಟೇಷನನಿಂದ ಯೂನಿಟ್ ಬಿಲ್ಡಿಂಗರೆಗೆ ದೋಷಯುಕ್ತ 11 ಕೆ.ವಿ.ಕೇಬಲನ್ನು ಬದಲಾಯಿಸುವುದು. ಈ ಕೆಲಸವು ತೀವ್ರ ಪ್ರಗತಿಯಲ್ಲಿದೆ.

ಆ) ಕೇಬಲ್ ಅಥವಾ ಲೈನನಲ್ಲಿ ದೋಷವುಂಟಾದಾಗ ಸಾಧ್ಯವಾದಷ್ಟು ಮಟ್ಟಿಗೆ ಪರ್ಯಾಯ ವಿದ್ಯುತ್ ಸರಬರಾಜಿಗೆ ವ್ಯವಸ್ಥೆ ಮಾಡಲಾಗುವುದು.

ಅಲ್ಲದೆ ಶಾಂತಿನಗರ ಮತ್ತು ಅಕ್ಕಿತಿಮ್ಮನಹಳ್ಳಿ ಪ್ರದೇಶಗಳ ವಿದ್ಯುತ್ ಸರಬರಾಜು ಸುಧಾರಿಸಲು 'ಬಿ' ಸ್ಟೇಷನನಿಂದ ಸಿದ್ದಯ್ಯ ರಸ್ತೆವರೆಗೆ ಹೊಸದಾಗಿ 11 ಕೆ.ವಿ. ಕೇಬಲ್ ಹಾಕಲು ಮತ್ತು ಹೆಚ್ಚುವರಿ ವಿತರಣಾ ಟ್ರಾನ್ಸಫಾರ್ಮರು ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಿಸಲಾಗಿದೆ. ಹೆಚ್ಚುವರಿ ಐದು ವಿತರಣಾ ಟ್ರಾನ್ಸಫಾರ್ಮರುಗಳ ಸ್ಥಾಪನೆಯ ಕೆಲಸವು ಪ್ರಗತಿಯಲ್ಲಿದೆ.

ಜಿಲ್ಲಾಪಂಚಾಯ್ತಿ ಮತ್ತು ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರುಗಳ ಹಾಗೂ ಉಪಾಧ್ಯಕ್ಷರುಗಳ ಪದಾವಧಿ ವಿಸ್ತರಣೆ.

73 - ಶ್ರೀ ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯ್ತಿಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳ ಅಧಿಕಾರಾವಧಿಯನ್ನು ನಿಗಧಿಪಡಿಸಲಾಗಿದೆಯೇ?

ಆ) ಇವರುಗಳ ಅಧಿಕಾರ ಅವಧಿಯನ್ನು ಒಂದು ವರ್ಷಗಳಿಗೆ ನಿಗದಿಪಡಿಸುವ ವಿಚಾರದ ಬಗ್ಗೆ ಸರ್ಕಾರ ಪರಿಶೀಲನೆ ನಡೆಸುತ್ತಿರುವುದು ನಿಜವೇ?

ಇ) ಒಂದು ವರ್ಷಗಳಲ್ಲಿ ಯಾವುದೇ ಅಭಿವೃದ್ಧಿಗಳನ್ನು ಮಾಡಲು ಸಾಧ್ಯವಾಗದೇ ಇರುವುದರಿಂದ ಇವರುಗಳ ಅಧಿಕಾರಾವಧಿಯನ್ನು ಕನಿಷ್ಟ ಎರಡೂವರೆ ವರ್ಷಗಳಿಗೆ ನಿಗದಿಪಡಿಸಲು ಇರುವ ತೊಂದರೆಗಳೇನು

ಈ) ಇದಲ್ಲದೆ ತಾಲ್ಲೂಕು ಪಂಚಾಯ್ತಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳಿಗೆ ಇದುವರೆವಿಗೂ ವಾಹನಗಳ ಸೌಕರ್ಯಗಳನ್ನು ನೀಡಲ್ಲದಿರುವುದರಿಂದ ಅವರು ಕಾರ್ಯನಿರ್ವಹಿಸಲು ತೊಂದರೆಯಾಗುತ್ತಿರುವುದರಿಂದ ಅವರುಗಳಿಗೆ ಶೀಘ್ರವಾಗಿ ವಾಹನ ಸೌಕರ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಹೌದು